# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಚಿಂತಾಮಣಿ

## ಸಿಸಿ ಸಂಖ್ಯೆ :146/2020

ಚಾಸಾ: 1

ಪ್ರಾಸಾ: 1

ದಿನಾಂಕ 15.07.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | : | ಮಂಜುನಾಥ ರೆಡ್ಡಿ |
| ತಂದೆಯ ಹೆಸರು | : | ವೆಂಕಟಾರೆಡ್ಡಿ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಸಿದ್ದೇಪಲ್ಲಿ ಗ್ರಾಮ, ಚಿಂತಾಮಣಿ |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ 2 ನನ್ನ ಹೆಂಡತಿ. ಚಾಸಾ 3 ಮತ್ತು 5 ನನ್ನ ಅಣ್ಣಂದಿರು. ಚಾಸಾ 4 ನನ್ನ ಮಾವ. ಆರೋಪಿತರೆಲ್ಲಾರನ್ನೂ ನಾನು ನೋಡಿದ್ದೇನೆ. ದಿನಾಂಕ 06.02.2020 ರಂದು ಮದ್ಯಾಹ್ನ 2.30 ರ ಸುಮಾರಿಗೆ ಸಿದ್ದೇಪಲ್ಲಿ ಬಸ್ ನಿಲ್ದಾಣದ ಬಳಿ ಸೈಟ್ ಬಗ್ಗೆ ಆರ್.ಎ.47 ರಂತೆ ಈ ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿತ್ತು. ಅ ಜಾಗದಲ್ಲಿ ಯರ್ರಪ್ಪ ಮತ್ತು ಆತನ ಮಕ್ಕಳು ಮತ್ತು ಊರಿನ ಜನರು ಜೆಸಿಬಿ ಮತ್ತು ಟ್ರ್ಯಾಕ್ಟರ್ ನಿಂದ ಮಣ್ಣನ್ನು ಹೊಡೆಯುತ್ತಿದ್ದು, ಆ ಸಮಯದಲ್ಲಿ ನಾನು ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿದ್ದರೂ ಏಕೆ ಮಣ್ಣನ್ನು ಹೊಡೆಯುತ್ತಿದ್ದೀರಿ ಎಂದು ಅವರನ್ನು ಕೇಳಲು ಹೋದಾಗ, ಅಲ್ಲೇ ಇದ್ದ ಸುಬ್ಬಿರೆಡ್ಡಿ, ಕೃಷ್ಣಪ್ಪ, ವೆಂಕಟರಾಮರೆಡ್ಡಿ, ಅಶೋಕ, ಸತೀಶ್, ವೆಂಕಟರವಣಪ್ಪ, ಭವ್ಯ, ರೂಪ, ಮಂಜುಳಾ ಅವರೆಲ್ಲಾರೂ ಸೇರಿ ಗಲಾಟೆ ಮಾಡಿದರು.

1 ನೇ ಆರೋಪಿ ಸುಬ್ಬಿರೆಡ್ಡಿ ದೊಣ್ಣೆಯಿಂದ ನನ್ನ ಎಡಭಾಗದ ಕಿವಿಗೆ ಹೊಡೆದರು.

ನಂತರ 6 ನೇ ಆರೋಪಿ ವೆಂಕಟರಾಮರೆಡ್ಡಿ ಕಬ್ಬಿಣದ ರಾಡ್ ನಿಂದ ನನ್ನ ತಲೆಯ ಹಿಂಭಾಗಕ್ಕೆ ಹೊಡೆದರು. ಗಾಯವಾಗಿ 4 ಹೊಲಿಗೆ ಬಿದ್ದಿರುತ್ತದೆ. 2 ನೇ ಆರೋಪಿ ಕೃಷ್ಣಪ್ಪ ದೊಣ್ಣೆಯಿಂದ ಬೆನ್ನಿನ ಮೇಲೆ ಹೊಡೆದ. ಆ ಸಮಯದಲ್ಲಿ 3 ನೇ ಆರೋಪಿ ಅಶೋಕ ಮಚ್ಚನ್ನು ತೆಗೆದುಕೊಂಡು ಬಂದಿದ್ದ. ಸತೀಶಾ, ರೂಪ, ಭವ್ಯ, ಮಂಜುಳಾ ಎಲ್ಲಾರೂ ಗಲಾಟೆ ಮಾಡಿದರು. ಎಲ್ಲಾ ಆರೋಪಿಗಳು ನನಗೆ ಹೊಡೆದರು. ಆ ಸಮಯದಲ್ಲಿ ಸ್ಥಳಕ್ಕೆ ಬಂದ ನನ್ನ ಹೆಂಡತಿ ಚಾಸಾ 2 ರವರಿಗೂ ಸತೀಶ, ಭವ್ಯ, ರೂಪ, ಕವಿತಮ್ಮ ಎಲ್ಲಾರೂ ಸೇರಿ ಹೊಡೆದರು. ಆ ಸಮಯದಲ್ಲಿ ಗಾಯವಾಗಿದ್ದ ನನ್ನನ್ನು ಮತ್ತು ಚಾಸಾ 2 ರವರನ್ನು ನನ್ನ ಅಣ್ಣ ಚಾಸಾ 3 ರವರು ಆಸ್ಪತ್ರೆಗೆ ಕರೆದುಕೊಂಡು ಹೋದರು. ಸ್ಥಳದಿಂದ ನಾವು ಆಸ್ಪತ್ರೆಗೆ ಹೋದೆವು, ಅವರು ಕೆಲಸ ಮಾಡುತ್ತಿದ್ದರು.

ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಪೋಲೀಸರಿಗೆ ದೂರನ್ನು ನೀಡಿದೆವು. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಆ ದಿನ ಹಲ್ಲೆ ಮಾಡಿದ ಆರೋಪಿಗಳ ಪೈಕಿ ಈ ದಿನ ನ್ಯಾಯಾಲಯದ ಮುಂದೆ ಕವಿತಾ, ರೂಪ, ಭವ್ಯ, ಮಂಜುಳ, ವೆಂಕಟರವಣಪ್ಪ ಇರುವುದಿಲ್ಲ. ಉಳಿದ ಆರೋಪಿಗಳನ್ನು ನೋಡಿದರೆ ಗುರುತಿಸಬಲ್ಲೆ. 7 ನೇ ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಕವಿತಾ, ರೂಪ, ಭವ್ಯ, ಮಂಜುಳ ರವರ ಮೇಲೆ ಸಹ ದೂರನ್ನು ನೀಡಿದ್ದೇನೆ, ಪೋಲೀಸರು ಏನು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

ಆ ದಿನ ಆರೋಪಿತರು ಹಲ್ಲೆ ಮಾಡಲು ಬಳಸಿದ ದೊಣ್ಣೆ, ರಾಡ್ ಮತ್ತು ಮಚ್ಚು ಇವೇ ಎಂದು ಸಾಕ್ಷಿ ನ್ಯಾಯಾಲಯದ ಮುಂದೆ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಎಂ.ಓ.1 ರಿಂದ 3 ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ಬಟ್ಟೆ ನನ್ನ ಹೆಂಡತಿಯ ಚೂಡಿದಾರ್ ಟಾಪ್ ಆಗಿರುತ್ತದೆ ಎಂದು ಗುರುತಿಸಿದ್ದರಿಂದ ಅದನ್ನು ಎಂ.ಓ.4 ಎಂದು ಗುರುತಿಸಲಾಯಿತು. ಪುನಃ ಪೋಲೀಸರ ಮುಂದೆ ವಿಚಾರಣೆ ನೀಡಿದ್ದೇನೆ.

**(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ನೀಡಲಾಯಿತು.)**

**ಪಾಟೀ ಸವಾಲು : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಿಪಿ 1 ದೂರಿನಲ್ಲಿ ಚಾಸಾ 2 ರವರ ಚೂಡಿದಾರ್ ಟಾಪ್ ನ್ನು ಭವ್ಯ, ಕವಿತಾ, ರೂಪ, ಮಂಜುಳಾ, ಸತೀಶ್ ರವರು ಹಿಡಿದು ಎಳೆದಾಡಿ ಹರಿದು ಹಾಕಿದ್ದರು ಮತ್ತು ಚಾಸಾ 2 ರವರ ಜುಟ್ಟು ಹಿಡಿದು ಎಳೆದಾಡಿದ್ದರು ಎಂದು ಹೇಳಿದ್ದೇನೆ ಎಂದರೆ ಸರಿ. ಅವಾಚ್ಯ ಶಬ್ಧಗಳಿಂದ ಬೈದಿದ್ದರು ಎಂದು ಹೇಳಿದ್ದೇನೆ ಎಂದರೆ ಸರಿ. ಆರೋಪಿತರು ಈ ನಿವೇಶನ ನಮಗೆ ಸೇರಿದ್ದು, ಇದರೆ ತಂಟೆಗೆ ಬಂದರೆ ಪ್ರಾಣ ಸಹಿತ ಬಿಡುವುದಿಲ್ಲವೆಂದು ಹೇಳಿದ್ದರು ಎಂದು ದೂರಿನಲ್ಲಿ ಹೇಳಿದ್ದೇನೆ ಎಂದರೆ ಸರಿ. ಗಲಾಟೆಯನ್ನು ಚಾಸಾ 4 ಮತ್ತು 5 ಬಿಡಿಸಿದ್ದರು ಎಂದು ಹೇಳಿದ್ದೇನೆ ಎಂದರೆ ಸರಿ.

ದಿನಾಂಕ 08.07.2020 ರಂದು ನೀಡಿದ ಮರುಹೇಳಿಕೆಯಲ್ಲಿ ಭವ್ಯ, ಕವಿತಾ, ರೂಪ, ಮಂಜುಳ ರವರು ದೂರಿನಲ್ಲಿ ಹೇಳಿದಂತೆ ನನ್ನ ಹೆಂಡತಿಯ ಮೇಲೆ ಜಗಳ ಮಾಡಿ ಬೈದು ಬೆದರಿಕೆ ಹಾಕಿಲ್ಲ ಎಂದು ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸುಳ್ಳು. ಸಾಕ್ಷಿಗೆ ಮರುಹೇಳಿಕೆಯಲ್ಲಿನ ಸಮಂಜಸ ಭಾಗವನ್ನು ಗುರುತಿಸುವ ಸಲುವಾಗಿ ಮರುಹೇಳಿಕೆಯನ್ನು ನಿಪಿ 2 ಎಂದು, ಸಮಂಜಸ ಭಾಗವನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ನಾನು ಮರುಹೇಳಿಕೆ ನೀಡಿದ್ದರಿಂದಲೇ ಪೋಲೀಸರು ಅವರುಗಳನ್ನು ಈ ಕೇಸಿನಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ನಾನು ದೂರನ್ನು ಅವರ ಮೇಲೆ ನೀಡಿದ್ದೇನೆ ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್ ವಿ ಆರ್ ವಕೀಲರಿಂದಃ**

ಗಲಾಟೆ ನಡೆದ ಬಗ್ಗೆ ಸರ್ಕಾರಿ ಆಸ್ಪತ್ರೆಯಲ್ಲಿ ದಿನಾಂಕ 06.07.2020 ರಂದು ದೂರನ್ನು ನೀಡಿದ್ದೇನೆ. ದೂರನ್ನು ವೈದ್ಯಾದಿಕಾರಿ ಬರೆದರು. ವೈದ್ಯಾದಿಕಾರಿಗೆ ನಾನೇ ಘಟನೆಯ ಬಗ್ಗೆ ಮಾಹಿತಿಯನ್ನು ನೀಡಿದ್ದೆ. ಆ ದೂರನ್ನು ಹೊರತುಪಡಿಸಿದ ಆಸ್ಪತ್ರೆಯಲ್ಲಿ ಮತ್ತೊಂದು ದೂರನ್ನು ನೀಡಿದ್ದೇನೆ. ಗಲಾಟೆಯ ಮೊದಲು ಪೋಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿದ್ದೆ. ಪೋಲೀಸ್ ಠಾಣೆಗೆಯಲ್ಲಿ ಆಸ್ಪತ್ರೆಯಲ್ಲಿ ನೀಡಿದ ದೂರಿನ ವಿಚಾರವನ್ನು ಹೇಳಿದ್ದು ನೆನಪಿಲ್ಲ.

2. 3 ರಿಂದ 5 ಮತ್ತು 11 ನೇ ಆರೋಪಿಗಳ ತಂದೆ ಮತ್ತು ನನ್ನ ತಂದೆ ಅಣ್ಣತಮ್ಮಂದಿರು ಎಂದರೆ ಸಾಕ್ಷಿ ದಾಯಾದಿಗಳು ಎಂದು ನುಡಿಯುತ್ತಾರೆ. ಅವರ ತಂದೆ

ಮತ್ತು ನನ್ನ ತಂದೆಯ ನಡುವೆ ಪಾಲು ವಿಭಾಗದ ದಾಖಲೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. 4 ನೇ ಆರೋಪಿಯ ಮನೆಯ ಪಶ್ಚಿಮಕ್ಕೆ ಹೊಂದಿಕೊಂಡು ನನ್ನ ಮನೆ ಇದೆ ಎಂದರೆ ಸರಿ. ನಮ್ಮ ಮತ್ತು 4 ನೇ ಆರೋಪಿ ಮನೆಯ ಉತ್ತರಕ್ಕೆ ರಸ್ತೆ ಇದೆ ಎಂದರೆ ಸರಿ. 4 ನೇ ಆರೋಪಿ ಮನೆಯ ದಕ್ಷಿಣಕ್ಕೆ ಪೂರ್ವ ಪಶ್ಚಿಮ ರಸ್ತೆ ಹೋಗುತ್ತದೆ ಎಂದರೆ ಸರಿ. 4 ನೇ ಆರೋಪಿ ಮನೆಯ ಮುಂದಿನ ಖಾಲಿ ಜಾಗ ಬಿಟ್ಟು ಪೂರ್ವಕ್ಕೆ ಚಿಂತಾಮಣಿ ಬಟ್ಲಹಳ್ಳಿ ಮುಖ್ಯ ರಸ್ತೆ ಬರುತ್ತದೆ ಎಂದರೆ ಸರಿ.

3. 5 ನೇ ಆರೋಪಿ ನಾರಾಯಣರೆಡ್ಡಿ ವಾಸವಿರುವ ಮನೆಯ ಮುಂದೆ ಆತನಿಗೆ ಸೇರಿದ ಒಂದು ಜೋಪಡಿ ಮನೆ ಇದೆ ಎಂದರೆ ಸರಿ. 4 ನೇ ಆರೋಪಿ, 5 ನೇ ಆರೋಪಿ ಮತ್ತು ನಮ್ಮ ಮನೆಯ ಮೇಲೆ ಹೇಳಿದ ಚೆಕ್ಕುಬಂದಿಯ ನಡುವೆ ಇರುವ ಖಾಲಿ ಜಾಗದ ವಿಚಾರವಾಗಿಯೇ ಸಿವಿಲ್ ದಾವೆ ನಡೆಯುತ್ತಿದೆ ಎಂದರೆ ಸರಿ. ಆ ಖಾಲಿ ಜಾಗದ ಮೇಲೆ ಯರ್ರಪ್ಪ ಎಂಬುವವರು ನನ್ನ ತಂದೆ ಮತ್ತು ಚಿನ್ನಪ್ಪರೆಡ್ಡಿ ರವರ ವಿರುದ್ಧ ನಿರ್ಬಂದಕಾಜ್ಞೆ ಕೋರಿ ಚಿಂತಾಮಣಿಯ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಆ ದಾವೆ ಯರ್ರಪ್ಪನ ಪರವಾಗಿ ತೀರ್ಪು ಆಗಿದೆ ಎಂದರೆ ಸರಿ. ಆ ತೀರ್ಪಿನ ವಿರುದ್ಧವೇ ಈ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದೇನೆ ಎಂದರೆ ಸರಿ.

4. ಯರ್ರಪ್ಪ ನವರ ಪರವಾಗಿ ತೀರ್ಪು ಆಗಿದ್ದರೂ ಸಹ ನಾವು ಪದೇ ಪದೇ ಹೋಗಿ ಅವರ ಸ್ವಾದೀನಕ್ಕೆ ತೊಂದರೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ನಮ್ಮ ವಿರುದ್ದ ಆ ವಿಚಾರವಾಗಿ ಕೆಂಚಾರ್ಲಹಳ್ಳಿ ಪೋಲೀಸ್ ಠಾಣೆಯಲ್ಲಿ ದೂರುಗಳನ್ನು ಅವರು ದಾಖಲಿಸಿದ್ದರು ಎಂದರೆ ಸಾಕ್ಷಿ ಅವರು ದಾಖಲಿಸಿದ್ದರು ನಾವು ದಾಖಲಿಸಿದ್ದೇವೆ ಎಂದು ನುಡಿಯುತ್ತಾರೆ.

5. ನನಗೆ ಸೇರಿದ ಟ್ರಾಕ್ಟರ್ ಇದೆ ಎಂದರೆ ಸರಿ. ನನ್ನ ಟ್ರಾಕ್ಟರ್ ನ್ನು ನಾನು ಖಾಲಿ ಜಾಗದಲ್ಲಿ ನಿಲ್ಲಿಸಲು ಪ್ರಯತ್ನ ಪಡುತ್ತೇನೆ ಎಂದರೆ ಸಾಕ್ಷಿ ನಿಲ್ಲಿಸುತ್ತೇನೆ ಎಂದು ನುಡಿಯುತ್ತಾರೆ. ಆ ವಿಚಾರವಾಗಿ ಪೋಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದ್ದರು ಎಂದರೆ ಸರಿ. ಆ ಟ್ರಾಕ್ಟರ್ ನಿಲ್ಲಿಸುವ ವಿಚಾರವಾಗಿ ನಮ್ಮ ಮತ್ತು ಆರೋಪಿತರ ಮದ್ಯೆ ಸುಮಾರು 10 ವರ್ಷಗಳಿಂದ ಜಗಳ ನಡೆಯುತ್ತಿದೆ ಎಂದರೆ ಸಾಕ್ಷಿ ನ್ಯಾಯಾಲಯದಲ್ಲಿ ನಡೆಯುತ್ತಿದೆ ಎಂದು ನುಡಿಯುತ್ತಾರೆ.

6. ನಾನು ಜೆಡಿಎಸ್ ಪಕ್ಷಕ್ಕೆ ಸೇರಿದವನು ಎಂದರೆ ಸರಿ. ಈ ತಾಲ್ಲೂಕಿನಲ್ಲಿ 10

ವರ್ಷಗಳಿಂದ ಜೆಡಿಎಸ್ ನವರೇ ಶಾಸಕರಾಗಿದ್ದರು ಎಂದರೆ ಸರಿ. ಟ್ರಾಕ್ಟರ್ ನಿಲ್ಲಿಸುವ ವಿಚಾರವಾಗಿ ಮತ್ತು ಸ್ವಾದೀನಕ್ಕೆ ತೊಂದರೆ ನೀಡುತ್ತಿದ್ದ ವಿಚಾರವಾಗಿ ಆರೋಪಿಗಳು ನನ್ನ ಮೇಲೆ ದೂರನ್ನು ದಾಖಲಿಸಿದರೂ ನಾನು ಶಾಸಕರ ಬೆಂಬಲದಿಂದ ದೂರು ದಾಖಲಾಗದಂತೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಜಾಗದ ವಿಚಾರವಾಗಿ 5 ನೇ ಆರೋಪಿಯ ಹೆಂಡತಿ ಪಾರ್ವತಮ್ಮನವರಿಗೆ ಹೊಡೆದು ಗಾಯಪಡಿಸಿದ್ದಕ್ಕೆ ಆಕೆ ನಮ್ಮ ವಿರುದ್ಧ ದೂರನ್ನು ದಾಖಲಿಸಿದ್ದಾರೆ ಎಂದರೆ ಸುಳ್ಳು ದೂರನ್ನು ದಾಖಲಿಸಿದ್ದಾರೆ ಎಂದು ನುಡಿಯುತ್ತಾರೆ. ನಮ್ಮ ಹೆಂಗಸರು ಮತ್ತು 5 ನೇ ಆರೋಪಿಯ ಹೆಂಡತಿಯ ನಡುವೆ ಆದ ಗಲಾಟೆಯ ವಿಚಾರವಾಗಿ ಆಕೆ ನಮ್ಮ ವಿರುದ್ಧ ದೂರನ್ನು ದಾಖಲಿಸಿದ್ದಾರೆ ಎಂದರೆ ಸುಳ್ಳು ದೂರನ್ನು ದಾಖಲಿಸಿದ್ದಾರೆ ಎಂದು ನುಡಿಯುತ್ತಾರೆ.

7. ನಮ್ಮ ಮತ್ತು 5 ನೇ ಆರೋಪಿಯ ಕುಟುಂಬದ ಮದ್ಯೆ ಗಲಾಟೆ ಆಗಿದೆ. ನಮ್ಮ ಮತ್ತು 5 ನೇ ಆರೋಪಿಯ ಕುಟುಂಬದ ಮದ್ಯೆ ಆದ ಗಲಾಟೆಯ ವಿಚಾರವಾಗಿಯೇ 5 ನೇ ಆರೋಪಿಯ ಹೆಂಡತಿ ನಮ್ಮ ವಿರುದ್ಧ ದೂರನ್ನು ದಾಖಲಿಸಿದ್ದಾರೆ ಎಂದರೆ ಹೆಂಗಸರು ಹೆಂಗಸರು ಗಲಾಟೆ ಮಾಡಿಕೊಂಡಿದ್ದಾರೆ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

8. 1 ನೇ ಆರೋಪಿ ನಮ್ಮ ಕುಟುಂಬಕ್ಕೆ ಸೇರಿಲ್ಲ ಮತ್ತು ನಮ್ಮ ಜಾತಿಗೆ ಸೇರಿದವರು ಅಲ್ಲ ಎಂದರೆ ಸರಿ. 2 ಮತ್ತು 7 ನೇ ಆರೋಪಿಗೂ ಸಹ ನಮ್ಮ ಕುಟುಂಬಕ್ಕೆ ಸೇರಿಲ್ಲ ಮತ್ತು ನಮ್ಮ ಜಾತಿಗೆ ಸೇರಿದವರು ಎಂದರೆ ಸರಿ. 1 ನೇ ಆರೋಪಿ ನಮ್ಮ ಗ್ರಾಮದಲ್ಲಿ ಕ್ರಾಂಗೇಸ್ ನ ಮುಖ್ಯ ನಾಯಕ ಎಂದರೆ ಸರಿ. 2 ಮತ್ತು 7 ನೇ ಆರೋಪಿ ಕ್ರಾಂಗ್ರೇಸ್ ನ ಮುಖಂಡರು ಎಂದರೆ ಸರಿ. ನಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ಆಗದೇ ಇದ್ದರೂ ಸಹ ರಾಜಕೀಯ ದುರುದ್ದೇಶದಿಂದ 1, 2 ಮತ್ತು 7 ನೇ ಆರೋಪಿಗಳನ್ನು ಸೇರಿಸಿ, ಅವರನ್ನು ಮಟ್ಟಹಾಕಲು ಸುಳ್ಳು ದೂರನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

9. 1, 2 ಮತ್ತು 7 ರವರು ಮತ್ತು ನಮ್ಮ ಮದ್ಯೆ ಯಾವುದೇ ವೈಶಮ್ಯ ಇಲ್ಲ ಎಂದರೆ ಸಾಕ್ಷಿ ರಾಜಕೀಯ ವೈಶಮ್ಮ ಇದೆ ಎಂದು ನುಡಿಯುತ್ತಾರೆ. ಅವರ ಮೇಲಿರುವ ರಾಜಕೀಯ ವೈಶಮ್ಯವನ್ನು ತೀರಿಸಿಕೊಳ್ಳಲು ಅವರ ಮೇಲೆ ಈ ದೂರನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

10. 1 ನೇ ಆರೋಪಿ ದೊಣ್ಣೆಯಿಂದ ಹೊಡೆದಿದ್ದರು. 1 ನೇ ಆರೋಪಿ ಹೊಡೆದ ದೊಣ್ಣೆ ನ್ಯಾಯಾಲಯದ ಮುಂದಿರುವ ಎಂ.ಓ.1 ರಷ್ಟಿತ್ತು. 1 ನೇ ಆರೋಪಿ ಹೊಡೆದ

ದೊಣ್ಣೆ ಎಷ್ಟು ಉದ್ದವಿತ್ತು ಎಂದು ಪುನಃ ಕೇಳಲಾಗಿ ಸಾಕ್ಷಿ 3 ಅಡಿ ಉದ್ದವಿತ್ತು ಎಂದು ನುಡಿಯುತ್ತಾರೆ. ಆ ದೊಣ್ಣೆ ಎಷ್ಟು ಉದ್ದವಿತ್ತು ಎಂದು ನಾನು ಅಳತೆ ಮಾಡಿಲ್ಲ. ಎಂ.ಓ.1 ಬಿದಿರಿನ ಕೋಲು ಎಂದರೆ ಸರಿ. ಎಂ.ಓ.1 ರಿಂದಲೇ ಹೊಡೆದಿದ್ದರು ಎಂಬ ಬಗ್ಗೆ ಪ್ರತ್ಯೇಕವಾಗಿ ಗುರುತನ್ನು ಇಟ್ಟುಕೊಂಡಿಲ್ಲ. ನ್ಯಾಯಾಲಯದಲ್ಲಿ ಎಂ.ಓ.1 ಇಟ್ಟಿರುವುದರಿಂದಲೇ ಆ ದೊಣ್ಣೆಯಿಂದ ಹೊಡೆದಿದ್ದರು ಎಂದು ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ಈ ದೊಣ್ಣೆ ಅಲ್ಲ ಇನ್ನೂ ದಪ್ಪನೇಯ ದೊಣ್ಣೆ ಇತ್ತು ಎಂದು ನುಡಿಯುತ್ತಾರೆ.

11. ಎಂ.ಓ.2 ರಾಡ್ ನಿಂದಲೇ 6 ನೇ ಆರೋಪಿ ಹೊಡೆದಿದ್ದರು ಎಂದು ಏನು ಗುರುತು ಇಟ್ಟುಕೊಂಡಿದ್ದೀರಿ ಎಂದರೆ ಸಾಕ್ಷಿ ಈ ರಾಡ್ ಅಲ್ಲ ಇಂತಹದ್ದೇ ರಾಡ್ ಎಂದು ನುಡಿಯುತ್ತಾರೆ.

12. ಎಂ.ಓ.3 ಮಚ್ಚನ್ನು ಆ ದಿನ ತೆಗೆದುಕೊಂಡು ಬಂದಿದ್ದರು ಎಂದು ಪ್ರತ್ಯೇಕವಾದ ಗುರುತನ್ನು ಇಟ್ಟುಕೊಂಡಿದ್ದೀರಾ ಎಂದರೆ ಸಾಕ್ಷಿ ಆ ಮಚ್ಚಿನ ಮೇಲೆ ಮಚ್ಚಿಗೆ ಗಾಯ ಆಗಿದೆ ಎಂದು ನುಡಿಯುತ್ತಾರೆ. ನಾನು ನೋಡಿದಾಗ ಆ ಮಚ್ಚಿಗೆ ಅದು ಒಂದೇ ಗಾಯ ಆಗಿತ್ತು. ಎಂ.ಓ.3 ರ ಮೇಲೆ ಎಷ್ಟು ಗಾಯಗಳು ಆಗಿವೆ ಎಂದು ಕೇಳಲಾಗಿ ಸಾಕ್ಷಿ ಎಂ.ಓ.3 ನ್ನು ನೋಡಿ ಎರಡು ಗಾಯಗಳು ಇವೆ ಎಂದು ನುಡಿಯುತ್ತಾರೆ. ಎಂ.ಓ.1 ರಿಂದ 3 ನ್ನು ಪೋಲೀಸರಿಗೆ ಮಹಜರ್ ಗೆ ಬಂದಾಗ ನಾನೇ ನೀಡಿದ್ದೇನೆ. ಎಂ.ಓ.1 ರಿಂದ 3 ನನಗೆ ಸೇರಿದ್ದು, ನಮ್ಮ ಮನೆಯಿಂದ ನಾನೇ ತಂದು ಪ್ರಕರಣವನ್ನು ಬಲಪಡಿಸಲು ಪೋಲೀಸರಿಗೆ ನಾನೇ ನೀಡಿದ್ದೇನೆ ಎಂದರೆ ಸರಿಯಲ್ಲ.

13. ಎಂ.ಓ.4 ಮಕ್ಕಳಿಗೆ ಸೇರಿದ್ದು, ಚಾಸಾ 2 ರವರಿಗೆ ಸೇರಿದ್ದಲ್ಲ ಎಂದರೆ ಸರಿಯಲ್ಲ. ಎಂ.ಓ.4 ನ್ನು ಉದ್ದೇಶಪೂರಕವಾಗಿ ನಾನೇ ಪೋಲೀಸರಿಗೆ ಹರಿದು ನೀಡಿದ್ದೇನೆ ಎಂದರೆ ಸುಳ್ಳು. ಎಂ.ಓ.4 ನ್ನು ಯಾರು ಕೊಟ್ಟಿದ್ದರು ಎಂದರೆ ಸಾಕ್ಷಿ ಗಲಾಟೆಯಲ್ಲಿ ಹರಿದು ಹೋಗಿದ್ದನ್ನು ಪೋಲೀಸರು ಮಹಜರ್ ಕಾಲದಲ್ಲಿ ಪಡೆದರು ಎಂದು ನುಡಿಯುತ್ತಾರೆ. ಪೋಲೀಸರು ವಿಚಾರಣೆ ಮಾಡಿದಾಗ ಎಂ.ಓ.4 ನನ್ನ ಹೆಂಡತಿಯ ಮೈಮೇಲೆ ಇತ್ತು. ನನ್ನ ಹೆಂಡತಿಯನ್ನು ಆಸ್ಪತ್ರೆಯಲ್ಲಿ ವಿಚಾರಣೆ ಮಾಡಿದ್ದರು. ಎಂ.ಓ.4 ನ್ನು ಆಸ್ಪತ್ರೆಯಲ್ಲಿ ಪೋಲೀಸರಿಗೆ ನೀಡಿಲಿಲ್ಲ, ಮಹಜರ್ ಕಾಲದಲ್ಲಿ ನೀಡಿದ್ದೇವು. ಆಸ್ಪತ್ರೆಯಲ್ಲಿ ಹೇಳಿಕೆ ನೀಡುವಾಗ ಎಂ.ಓ.4 ನ್ನು ಚಾಸಾ 2 ಧರಿಸಿದ್ದರು. ಘಟನೆಯಾದ ಎಷ್ಟು ದಿನಕ್ಕೆ ಎಂ.ಓ.4 ನ್ನು ಪೋಲೀಸರಿಗೆ ನೀಡಿದ್ದೀರಿ ಎಂದರೆ ಸಾಕ್ಷಿ ಮಹಜರ್ ಕಾಲದಲ್ಲಿ ನೀಡಿದ್ದೆ ಎಂದು

ನುಡಿಯುತ್ತಾರೆ. ಪೋಲೀಸರು ಮಹಜರ್ ಗೆ ಬರುವವರೆಗೂ ಎಂ.ಓ.4 ಚಾಸಾ 2 ರವರ ಮೈಮೇಲೆ ಇರಲಿಲ್ಲ, ತೆಗೆದು ಹಾಕಿದ್ದರು.

14. ಘಟನೆಯಾದ 2 ರಿಂದ 3 ದಿನಕ್ಕೆ ಪೋಲೀಸರು ಮಹಜರ್ ಗೆ ಬಂದಿದ್ದರು. ಘಟನೆಯಾದ 2 ರಿಂದ 3 ದಿನದ ಬಳಿಕ ಎಂ.ಓ.4 ನ್ನು ಪೋಲೀಸರಿಗೆ ನೀಡಿದ್ದೆ ಎಂದರೆ ಸರಿ. ಈ ಕೇಸನ್ನು ಬಲಪಡಿಸುವ ಉದ್ದೇಶದಿಂದ, ಯಾರಿಗೋ ಸೇರಿದ ಮಗುವಿನ ಹರಿದು ಹೋದ ಎಂ.ಓ.4 ನ್ನು ಪೋಲೀಸರಿಗೆ ನೀಡಿದ್ದೇನೆ ಎಂದರೆ ಸರಿಯಲ್ಲ.

15. 2 ನೇ ಆರೋಪಿ ದೊಣ್ಣೆಯಿಂದ ಹೊಡೆದಿದ್ದರು. 2 ನೇ ಆರೋಪಿ ಹೊಡೆದ ದೊಣ್ಣೆ ನ್ಯಾಯಾಲಯದ ಮುಂದೆ ಇಲ್ಲ. ನಮ್ಮ ಮತ್ತು ಆರೋಪಿತರ ಮದ್ಯೆ ಯಾವುದೇ ಗಲಾಟೆ ಆಗದೇ ಇದ್ದರೂ ಆರೋಪಿಗಳು ಜೆಸಿಬಿ ಮತ್ತು ಟ್ರಾಕ್ಟರ್ ತಂದು ಮಣ್ಣು ಹೊಡೆಯದೇ ಇದ್ದರೂ ದ್ವೇಷ ತೀರಿಸಿಕೊಳ್ಳಲು ಸುಳ್ಳು ದೂರನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಉದ್ದನೆಯ ಕೋಲಿನಿಂದ ಹೊಡೆದಾಗ ನನ್ನ ಕಿವಿಯ ಮೇಲೆ ರಕ್ತ ಬಂದಿತ್ತು. ನನ್ನ ತಲೆಯ ಮೇಲೆ ಗಾಯ ಆದಾಗ ರಕ್ತ ಬರುತ್ತಿತ್ತು. ಆ ರಕ್ತ ನನ್ನ ಅಂಗಿಯ ಮೇಲೆ ಬಿದ್ದಿತ್ತು. ರಕ್ತವಾಗಿದ್ದ ಅಂಗಿಯನ್ನು ಪೋಲೀಸರಿಗೆ ಮಹಜರ್ ಕಾಲದಲ್ಲಿ ನೀಡಿದ್ದೇನೆ.ನನ್ನ ಕಿವಿ ಮತ್ತು ತಲೆಯ ಮೇಲೆ ಯಾವುದೇ ಗಾಯ ಆಗಿಲ್ಲ, ನಾನು ಯಾವುದೇ ಅಂಗಿಯನ್ನು ಪೋಲೀಸರಿಗೆ ನೀಡಿಲ್ಲ ಎಂದರೆ ಸರಿಯಲ್ಲ.

16. ಗಲಾಟೆ ಸಮಯದಲ್ಲಿ ಅರ್ಧ ಹರಿದು ಹೋಗಿತ್ತು ಎಂದು ಹೇಳಿದ ಎಂ.ಓ.4 ಉಳಿದ ಅರ್ಧ ಭಾಗವನ್ನು ಪೋಲೀಸರಿಗೆ ನೀಡಿಲ್ಲವಾ ಎಂದರೆ ಸಾಕ್ಷಿ ನೀಡಿದ್ದೇವೆ ಅವರು ಏನು ಮಾಡಿದ್ದಾರೋ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಎಂ.ಓ.4 ನ್ನು ಮನೆಯಿಂದ ತಂದು ನೀಡಿದ್ದೇವೆ, ಘಟನೆ ಸಮಯದಲ್ಲಿ ಯಾವುದೇ ಬಟ್ಟೆ ಹರಿದಿಲ್ಲ ಎಂದರೆ ಸರಿಯಲ್ಲ. ಎಂ.ಓ.4 ರ ಹರಿದ ಅರ್ಧ ಭಾಗ ಈಗಲೂ ನಮ್ಮ ಮನೆಯಲ್ಲಿ ಇದೆ ಎಂದರೆ ಸಾಕ್ಷಿ ಮಹಜರ್ ಕಾಲದಲ್ಲಿ ನೀಡಿದ್ದೇವೆ ಎಂದು ನುಡಿಯುತ್ತಾರೆ.

**ನ್ಯಾಯಾಲಯದ ಸಮಯ ಆಗಿದ್ದರಿಂದ ಮದ್ಯಾಹ್ನ 3.00 ಗಂಟೆಗೆ ಮುಂದೂಡಲಾಯಿತು.**

**ಓ ಹೇ ಕೇ ಸ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಹಾಗೂ ಜೆಎಂಎಫ್‌ಸಿ, ಚಿಂತಾಮಣಿ.**

**<u>ಸಾಕ್ಷಿಯನ್ನು ಮದ್ಯಾಹ್ನ 3.20 ಕ್ಕೆ ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್ ವಿ ಆರ್ ವಕೀಲರಿಂದಃ</u>**

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಬೆಳಗ್ಗೆ ನ್ಯಾಯಾಲಯದಲ್ಲಿ ವಿಚಾರಣೆಯಾದಾಗ ಗುರುತಿಸಲಾಗಿದ್ದ ಎಂ.ಓ.1 ನ್ನು ಬದಲಾಯಿಸಲಾಗಿದೆ ಎಂದು ಹೇಳಿರುತ್ತಾರೆ. ಈ ಬಗ್ಗೆ ನ್ಯಾಯಾಲಯದಲ್ಲಿ ಹಾಜರಿದ್ದ ಮಹಿಳಾ ಪೇದೆ ಸಂಖ್ಯೆ 589 ಶ್ರೀಮತಿ ಸುಮಾ ರವರನ್ನು ವಿಚಾರಿಸಲಾಗಿ ಅವರು ಬೆಳಗ್ಗೆ ವಿಚಾರಣೆಯ ಸಮಯದಲ್ಲಿ ತಪ್ಪಾಗಿ ಬೇರ ಪ್ರಕರಣದ ಮುದ್ದೆ ಮಾಲನ್ನು ಹಾಜರುಪಡಿಸಿದ್ದು, ಅದರ ಬಗ್ಗೆ ತಮಗೆ ತಿಳಿದ ನಂತರ ಈ ಕೇಸಿನ ಸಂಬಂಧಿಸಿದ ಮುದ್ದೆ ಮಾಲನ್ನು ಹಾಜರುಪಡಿಸಿದ್ದೇನೆ ಎಂದು ನುಡಿದಿರುತ್ತಾರೆ)**

17. ಬೆಳಗ್ಗೆ ನ್ಯಾಯಾಲಯದಲ್ಲಿ ತೋರಿಸಿದ ಎಂ.ಓ.1 ಈಗ ತೋರಿಸುತ್ತಿರುವ ದೊಣ್ಣೆ ಅಲ್ಲ ಎಂದರೆ ಸರಿ. 5ನೇ ಆರೋಪಿ ಹೆಂಡತಿ ನಮ್ಮ ಮೇಲೆ ದಾಖಲಿಸಿದ್ದ ಪ್ರಕರಣದಲ್ಲಿ ನಾವು ಜಿಲ್ಲಾ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದಿದ್ದೇವು ಎಂದರೆ ಸರಿ. ಪೋಲೀಸರು ನಿಮ್ಮನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿದ್ದರಾ ಎಂದರೆ ಸಾಕ್ಷಿ ಆಸ್ಪತ್ರೆಯಲ್ಲಿ ವಿಚಾರಣೆ ಮಾಡಿದ್ದರು ಎಂದು ನುಡಿಯುತ್ತಾರೆ. ಪೋಲೀಸರು ಹೇಳಿಕೆಯನ್ನು ಪಡೆದು ನನ್ನ ಸಹಿಯನ್ನು ಪಡೆದುಕೊಂಡಿದ್ದರು. ದಿನಾಂಕ 06.07.2020 ರಂದು ನನ್ನ ಹೇಳಿಕೆಯನ್ನು ಪಡೆದಿದ್ದರು. ನಾನು ಹೇಳಿದಂತೆ ದಿನಾಂಕ 06.07.2020 ರಂದು ಪೋಲೀಸರು ಆಸ್ಪತ್ರೆಗೆ ಬಂದಿಲ್ಲ, ನನ್ನಿಂದ ಯಾವುದೇ ಹೇಳಿಕೆಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ದಿನಾಂಕ 06.07.2020 ರಂದು ನಾನು ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

18. ನಾನು ಅದೇ ದಿನ ಚಿಕಿತ್ಸೆ ಪಡೆದು ಮನೆಗೆ ಹೋಗಿದ್ದೆ. ಚಿಕಿತ್ಸೆ ಪಡೆದ ನಂತರ ಪ್ರತಿ ದಿನ ಬಂದು 15 ದಿನಗಳ ಕಾಲ ಗಾಯಗಳಿಂದ ಡ್ರಸಿಂಗ್ ಮಾಡಿಸಿಕೊಂಡು ಹೋಗುತ್ತಿದ್ದೆ. 15 ದಿನ ಗಾಯಗಳಿಗೆ ಡ್ರಸಿಂಗ್ ಮಾಡಿಸಿಕೊಂಡ ಬಗ್ಗೆ ಪೋಲೀಸರಿಗೆ ದಾಖಲೆಗಳನ್ನು ದೂರನ್ನು ನೀಡಿದಾಗ ನೀಡಿದ್ದೆ. ದೂರು ನೀಡಿದೆ ಎಂದು ಹೇಳಿದ ಬಳಿಕ ಪೋಲೀಸರು ನನ್ನ ಹೇಳಿಕೆಯನ್ನು ಪಡೆದಿಲ್ಲ. ಪ್ರಾಣ ಬೆದರಿಕೆ ಹಾಕಿದ್ದರು ಮತ್ತು ಅವ್ಯಾಚ್ಯ ಶಬ್ಧಗಳಿಂದ ಬೈದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

19. ನಾನು ವಾಸವಿರುವ ಮನೆ ನಂ.54 ಎಂದರೆ ಸಾಕ್ಷಿ ಅದು ಖಾಲಿ ಸೈಟ್ ನ ಸಂಖ್ಯೆ ಎಂದು ನುಡಿಯುತ್ತಾರೆ. ಕ್ರಮ ಸಂಖ್ಯೆ.54 ಮನೆ ಸಂಖ್ಯೆ.71 ಚಿನ್ನಪ್ಪರೆಡ್ಡಿ ಬಿನ್ ಸೀತಪ್ಪ ಯಾರು ಎಂದು ನನಗೆ ಗೊತ್ತಿಲ್ಲ. ಸೀತಮ್ಮ ಬಿನ್ ಚಿನ್ನಪ್ಪರೆಡ್ಡಿ ಎಂದರೆ 6 ನೇ ಆರೋಪಿಯ ತಂದೆ ತಾಯಿ. ವೆಂಕಟರೆಡ್ಡಿ ಬಿನ್ ಚೌಡಾರೆಡ್ಡಿ ಎಂದರೆ ನನ್ನ ತಂದೆ. ಖಾತೆ ನಂ.54 ಮನೆ ನಂ.71/1 ವೆಂಕಟರೆಡ್ಡಿ ಬಿನ್ ಚೌಡಾರೆಡ್ಡಿ ರವರಿಗೆ ಸೇರಿದ್ದು ಎಂದರೆ ಖಾತೆ ಸಂಖ್ಯೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಮನೆಯ ಖಾತೆ ಸಂಖ್ಯೆಯನ್ನು ದೂರಿನಲ್ಲಿ ನೀಡಿದ್ದೇನೆ ಎಂದರೆ ಸರಿಯಲ್ಲ.

20. ಪೋಲೀಸರಿಗೆ ನೀಡಿದ ದೂರಿನಲ್ಲಿ ಖಾತೆ ನಂ.54/1 ಎಂದು ಬರೆಸಿದ್ದೇನೆ. ಈ ನ್ಯಾಯಾಲಯದಲ್ಲಿ ನಡೆಯುತ್ತಿರುವ ಆರ್.ಎ.47/2007, ಅಸೆಸ್ಮೆಂಟ್ ಲೀಸ್ಟ್ extract ನಂ.52 ಜೆಂಜರ್ ಮತ್ತು ಆಸ್ತಿ ಸಂಖ್ಯೆ 69 ಎಂದರೆ ಸುಳ್ಳು. ಆ ಸ್ವತ್ತಿನ ಒಟ್ಟು ವಿಸ್ತೀರ್ಣ 98X70, ಆ ಪ್ರಕರಣ 35X50 ಅಡಿಗೆ ನಡೆಯುತ್ತಿದೆ ಎಂದರೆ ಸರಿ.

21. 3 ನೇ ಆರೋಪಿ ಚಿಂತಾಮಣಿಯ ಮಾರುತಿ ಆಟೋ ಮೊಬೈಲ್ ನಲ್ಲಿ ಕೆಲಸ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 4 ನೇ ಆರೋಪಿ ನಿವೃತ್ತ ಶಿಕ್ಷಕ, ಚಿಂತಾಮಣಿಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. 4 ನೇ ಆರೋಪಿ ನಮ್ಮ ಊರ ವಾಸಬಿಟ್ಟು ಎಷ್ಟು ವರ್ಷ ಕಳೆದಿದೆ ಎಂದು ನನಗೆ ಗೊತ್ತಿಲ್ಲ. ಭವ್ಯ ರವರು ಬೆಂಗಳೂರಿನಲ್ಲಿ ಸಾಫ್ಟ್ ವೇರ್ ಕೆಲಸ ಮಾಡಿಕೊಂಡು ಅಲ್ಲಿಯೇ ವಾಸವಾಗಿದ್ದಾರೆ ಎಂದರೆ ಸಾಕ್ಷಿ ಅವರು ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಾರೆಂದು ಗೊತ್ತು ಎಂದು ನುಡಿಯುತ್ತಾರೆ. ಸಾಕ್ಷಿ ಸ್ವತಃ ಕರೋನಾ ಸಮಯದಲ್ಲಿ ಅವರು ಊರಿಗೆ ಬಂದಿದ್ದರು ಎಂದು ನುಡಿಯುತ್ತಾರೆ. ನಾನು ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆದಾಗ ಕೋವಿಡ್ ಪರೀಕ್ಷೆ ಮಾಡಿ ವರದಿ ಕೊಟ್ಟಿಲ್ಲ. ನಾನು ಆಸ್ಪತ್ರೆಗೆ ಹೋಗಿಲ್ಲ, ಚಿಕಿತ್ಸೆ ಪಡೆದಿಲ್ಲ, ನಾನು ಹೇಳಿದಂತೆ ಯಾವುದೇ ಗಲಾಟೆ ನಡೆದಿಲ್ಲ ಎಂದರೆ ಸುಳ್ಳು.

22. ಭವ್ಯ, 3 ಮತ್ತು 4 ನೇ ಆರೋಪಿಗಳು ಊರಿನಲ್ಲಿ ವಾಸವಿಲ್ಲದೇ ಇದ್ದರೂ ಅವರ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದೂರನ್ನು ಅವರುಗಳ ಮೇಲೆ ನೀಡಿದ್ದೇನೆ ಎಂದರೆ ಸರಿಯಲ್ಲ. ರಾಜಕೀಯ ದುರುದ್ದೇಶದಿಂದ ನಮ್ಮ ಕುಟುಂಬಕ್ಕೆ ಸಂಬಂಧಪಡದೇ ಇರುವವರ ಮೇಲೂ ಅವರನ್ನು ರಾಜಕೀಯವಾಗಿ ಮಟ್ಟಹಾಕಲು ಸುಳ್ಳು ದೂರನ್ನು ಅವರ ಮೇಲೂ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

23. 1 ನೇ ಆರೋಪಿಯ ಮಗ ಮತ್ತು ಸೊಸೆ ಪೋಲೀಸ್ ಇಲಾಖೆಯಲ್ಲಿ ಇದ್ದಾರೆ ಎಂದರೆ ಸರಿ. 1 ನೇ ಆರೋಪಿಗೆ ಕಾನೂನು ತಿಳಿದಿದೆ ಮತ್ತು ಊರಿನಲ್ಲಿ ಹಿರಿಯರಾಗಿ ಊರಿನ ಪಂಚಾಯತಿ ಮಾಡುತ್ತಾರೆ ಎಂದರೆ ಸರಿಯಲ್ಲ. 1 ನೇ ಆರೋಪಿಗೆ ರಾಜಕೀಯ ದಕ್ಕೆ ತರಲು ಅವರ ಮೇಲೆ ಈ ಕೇಸನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

24. ಚಾಸಾ 2 ಗಲಾಟೆಯಾದ 5 ನಿಮಿಷಕ್ಕೆ ಸ್ಥಳಕ್ಕೆ ಬಂದರು. ಬಟ್ಲಹಳ್ಳಿ ಚಿಂತಾಮಣಿಯ ಮುಖ್ಯ ರಸ್ತೆಯಲ್ಲಿ ಸಾಕಷ್ಟು ವಾಹನಗಳು ಸಂಚರಿಸುತ್ತವೆ ಮತ್ತು ಜನ ದಟ್ಟಣೆ ಇರುತ್ತದೆ ಎಂದರೆ ಸರಿ. ಜೆಸಿಬಿ ಮತ್ತು ಟ್ರಾಕ್ಟರ್ ನಿಂದ ಮಣ್ಣು ಹೊಡುತ್ತಿದ್ದರು ಎಂದು ಹೇಳುವ ಸ್ಥಳದ ಪಕ್ಕದಲ್ಲಿ ಬಸ್ ನಿಲ್ದಾಣ ಇದೆ, ಚಿಂತಾಮಣಿಗೆ ಹೋಗುವವರು ಬಸ್ಸಿಗಾಗಿ ಅಲ್ಲಿಯೇ ಕಾಯುತ್ತಾರೆ ಎಂದರೆ ಸರಿ. ರಸ್ತೆಯ ಪೂರ್ವಕ್ಕೆ ಅಶ್ವತ್ಥಕಟ್ಟೆ ಇದೆ, ಅಲ್ಲಿ ಬೇವು ಮತ್ತು ಅರಳಿ ಮರ ಇದೆ ಎಂದರೆ ಸರಿ. ಮದ್ಯಾಹ್ನದ ಹೊತ್ತಿನಲ್ಲಿ ಬಿಸಿಲಿಗೆ ಜನರು ಅಲ್ಲಿ ವಿಶ್ರಾಂತಿ ಮಾಡುತ್ತಾರೆ ಎಂದರೆ ಸರಿ.

25. ಆರೋಪಿತರಿಗೆ ಸೇರಿದ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಅವರಿಗೆ ತೊಂದರೆ ನೀಡಲು ಈ ದೂರನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಓ.ಎಸ್.124/2001 ಯರ್ರಪ್ಪನವರ ಪರ ಡಿಕ್ರಿಯಾಗಿ ನಿರ್ಭಂದಕಾಜ್ಞೆ ಆದೇಶ ನ್ಯಾಯಾಲಯದಿಂದ ಆಗಿದೆ ಎಂದರೆ ಸರಿಯಲ್ಲ. ಓ.ಎಸ್.124/2001 ರ ದಾವೆ ಏನಾಗಿದೆ ಎಂದು ನಾನು ತಿಳಿದುಕೊಂಡಿದ್ದೆ. ಓ.ಎಸ್.124/2001 ರ ಆದೇಶದ ಮೇಲೆ ಮೇಲ್ಮನವಿಯನ್ನು ಈ ನ್ಯಾಯಾಲಯದಲ್ಲಿ ನಾನು ಸಲ್ಲಿಸಿದ್ದೇನೆ ಎಂದರೆ ಸರಿ. ಓ.ಎಸ್.124/2001 ಅವರ ಪರ ಆಗಿದ್ದರೂ ಸಹ ಅವರಿಗೆ ತೊಂದರೆ ನೀಡಿದ ಅವರು ನೀಡಿದ ದೂರನ್ನು ದಾಖಲಾಗದಂತೆ ರಾಜಕೀಯ ಪ್ರಭಾವ ಬೀರಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ಹಲ್ಲೆ ಮಾಡಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ, ಅವಾಚ್ಯ ಶಬ್ಧಗಳಿಂದ ಬೈದಿಲ್ಲ, ಚಾಸಾ 2 ರವರ ಬಟ್ಟೆಯನ್ನು ಹರಿದು ಹಾಕಿ ಆಕೆಗೆ ಯಾರು ಹೊಡೆದಿಲ್ಲ, ಪೋಲೀಸರು ಸ್ಥಳಕ್ಕೆ ಬಂದಿಲ್ಲ, ಮುದ್ದೆ ಮಾಲುಗಳನ್ನು

ಪೋಲೀಸರಿಗೆ ನೀಡಿಲ್ಲ, ಸುಳ್ಳು ದೂರನ್ನು ಆರೋಪಿತರ ಮೇಲೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಪರವಾಗಿ ಯಾವುದೇ ನ್ಯಾಯಾಲಯದ ಆದೇಶ ಆಗದೇ ಇದ್ದರೂ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಹಾಗೂ ಜೆಎಂಎಫ್‌ಸಿ, ಚಿಂತಾಮಣಿ.**